**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>**

**<u>ಸಿ.ಸಿ.ನಂ.380/2020</u>**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ : ಯಾಸಿನ ಮುಲ್ಲಾ ತಂದೆ ಅಬ್ದುಲ ರಜಾಕ
ವಃ 23 ವರ್ಷ, ಉಃ ಡ್ರೈವರ ಕೆಲಸ
ಸಾಃ ನಾದಕೆಡಿ ಗ್ರಾಮ, ತಾಃ ಇಂಡಿ ,
ಜಿಃ ವಿಜಯಪುರ

-----

**<u>ದೋಷಾರೋಪಣೆ</u>**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 26-05-2020 ರಂದು ಸಾಯಂಕಾಲ 05.50 ಗಂಟೆ ಸುಮಾರಿಗೆ ಸೇಡಂ ಪೊಲೀಸ ಠಾಣೆಯ ವ್ಯಾಪ್ತಿಯಲ್ಲಿ ಆಪಾದಿತನು ತನ್ನ ವಶದಲ್ಲಿದ್ದ ಲಾರಿ ನಂ. KA-33/B-1147 ನೇದ್ದನ್ನು ಯಾದಗಿರಿ ಕಡೆಯಿಂದ ಹಂದರಕಿ ಕಡೆಗೆ ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಹಂದರಿಕಿ ಕ್ರಾಸ ಹತ್ತಿರ ಎದುರುಗಡೆಯಿಂದ ಬರುತ್ತಿದ್ದ ಮೋಟಾರು ಸೈಕಲ ನಂ. KA-36/V-6646 ನೇದ್ದಕ್ಕೆ ಡಿಕ್ಕಿ ಪಡಿಸಿ ಅಪಘಾತ ಮಾಡಿದ್ದು, ಕಾರಣ ಆರೋಪಿತನಾದ ನೀನು ಭಾ.ದಂ.ಸಂ. ಕಲಂ.279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ತನ್ನ ವಶದಲ್ಲಿದ್ದ ಮೋಟಾರ ಸೈಕಲನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಎದುರುಗಡೆಯಿಂದ ಬರುತ್ತಿದ್ದ ಮೋಟಾರು ಸೈಕಲ ನಂ. KA-36/V-6646 ನೇದ್ದಕ್ಕೆ ಡಿಕ್ಕಿ ಪಡಿಸಿದ್ದರಿಂದ ಚಾಸಾ.1ರವರಿಗೆ ಭಾರಿ ರಕ್ತಗಾಯವಾಗಿದ್ದು ಮೋಟಾರು ಸೈಕಲ ಹಿಂದೆ ಕುಳಿತ ಮಲ್ಲಪ್ಪ ಇತನಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಕಾರಣ ಆರೋಪಿತನಾದ ನೀನು ಭಾ.ದಂ.ಸಂ. ಕಲಂ.338 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆಪಾದಿತನು ತನ್ನ ವಶದಲ್ಲಿದ್ದ ಮೋಟಾರ್ ಸೈಕಲನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಎದುರುಗಡೆಯಿಂದ ಬರುತ್ತಿದ್ದ ಮೋಟಾರು ಸೈಕಲ ನಂ. KA-36/V-6646 ನೇದ್ದಕ್ಕೆ ಡಿಕ್ಕಿ ಪಡಿಸಿದ್ದರಿಂದ

ಮೋಟಾರು ಸೈಕಲ ಹಿಂದೆ ಕುಳಿತ ಮಲ್ಲಪ್ಪ ಇತನಿಗೆ ಗಂಭೀರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲಿಯೇ ಮೃತ ಪಟ್ಟಿದ್ದು, ಕಾರಣ ಆರೋಪಿತನಾದ ನೀನು ಭಾ.ದಂ.ಸಂ. ಕಲಂ. 304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನು ತನ್ನ ವಶದಲ್ಲಿದ್ದ ಮೋಟರ ಸೈಕಲನ್ನು ಅತೀ ವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿ ಎದುರುಗಡೆಯಿಂದ ಬರುತ್ತಿದ್ದ ಮೋಟಾರು ಸೈಕಲ ನಂ. KA-36/V-6646 ನೆದ್ದಕ್ಕೆ ಡಿಕ್ಕಿ ಪಡಿಸಿದ್ದರಿಂದ, ಚಾಸಾ.1ರವರಿಗೆ ಭಾರಿ ರಕ್ತಗಾಯವಗಿದ್ದು, ಮೋಟಾರು ಸೈಕಲ ಹಿಂದೆ ಕುಳಿತ ಮಲ್ಲಪ್ಪ ಇತನಿಗೆ ಗಂಭೀರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲಿಯೇ ಮೃತ ಪಟ್ಟಿದ್ದರಿಂದ, ಲಾರಿ ಚಾಲಕನು ತನ್ನ ಲಾರಿಯನ್ನು ಅಪಘಾತ ಪಡಿಸಿದ ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿದ್ದು, ಕಾರಣ ಆರೋಪಿತನಾದ ನೀನು ಭಾ.ದಂ.ಸಂ.ಕಲಂ 187ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ,

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

(ಆರೋಪಣೆಯನ್ನು ಆರೋಪಿತರಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ.)

ಸಹಿ/-

ದಿನಾಂಕ 05-08-2025 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ**

**ಸಿ.ಸಿ.ನಂ.380/2020**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ : ಯಾಸಿನ ಮುಲ್ಲಾ ತಂದೆ ಅಬ್ದುಲ ರಜಾಕ
ವಃ 23 ವರ್ಷ, ಉಃ ಡ್ರೈವರ ಕೆಲಸ
ಸಾಃ ನಾದಕೆಡಿ ಗ್ರಾಮ, ತಾಃ ಇಂಡಿ ,
ಜಿಃ ವಿಜಯಪುರ

**ಆಪಾದನೆ**

ಪ್ರಃ-1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿಯಾ?

ಉತ್ತರಃ-

ಪ್ರಃ-2) ನೀನು ತಪ್ಪನ್ನು ಒಪ್ಪಿಕೊಳ್ಳುತ್ತಿಯಾ ಅಥವಾ ವಿಚಾರಣೆ ನಡೆಯಬೇಕಾ?

ಉತ್ತರಃ-

ಸಹಿ/-

ದಿನಾಂಕ 05-08-2025 ಪ್ರ.ದ.ನ್ಯಾ.ದಂ. ಸೇಡಂ.